> ಮಾದಕ ವಸ್ತುಗಳ ಜಾಲ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಿಸಿದ್ದು ಯುವ ಸಮೂಹ ಮಾದಕ ವಸ್ತುಗಳಂತಹ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗಬೇಕು.
>
> • **ಎಂ.ಬಿ.ಅಭಿಮನ್ಯುಕುಮಾರ್**
> ಕರ್ನಾಟಕ ಜನಜಾಗೃತಿ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ

ಸುದ್ದಿ ಸಿಂಚನ

ಅಗ್ನಿವೀರ್ ಪ್ರವೇಶ ಆಯ್ಕೆ ಪರೀಕ್ಷೆಗೆ ಅರ್ಜಿ ಆಹ್ವಾನ

ಮಡಿಕೇರಿ: ಭಾರತೀಯ ವಾಯುಪಡೆಯಿಂದ ಅಗ್ನಿಪತ್ ಯೋಜನೆಯಡಿ ಅಗ್ನಿವೀರ್‌ವಾಯು ಪ್ರವೇಶ ಆಯ್ಕೆ ಪರೀಕ್ಷೆಗಾಗಿ ಅವಿವಾಹಿತ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ.50 ರಷ್ಟು ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಅಥವಾ ಡಿಪ್ಲೋಮಾ ವಿಭಾಗದ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೋಮೊಬೈಲ್, ಕಂಪ್ಯೂಟರ್‌ಸೈನ್ಸ್, ಇನ್‌ಸ್ಟುಮೆಂಟ್ ಟೆಕ್ನಾಲಜಿ, ಇನ್ಫಾರ್ಮೇಶನ್ ಟೆಕ್ನಾಲಜಿಯಲ್ಲಿ ಶೇ.50 ರಷ್ಟು ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಇಲ್ಲವೇ 2 ವರ್ಷದ ವೃತ್ತಿಪರ ಕೋರ್ಸ್‌ಗಳಲ್ಲಿ ಭೌತಶಾಸ್ತ್ರ ಮತ್ತು ಗಣಿತ ವಿಷಯಗಳಲ್ಲಿ ವ್ಯಾಸಂಗ ಮಾಡಿ ಶೇ.50ರಷ್ಟು ಅಥವಾ ಯಾವುದೇ ಪಿ.ಯು.ಸಿ ವಿಭಾಗದಲ್ಲಿ ಶೇ,50ರಷ್ಟು ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು.

ಅಭ್ಯರ್ಥಿ ಜು..3, 2004 ರಿಂದ ಜ.3, 2008ರ ನಡುವೆ ಜನಿಸಿರಬೇಕು.(ಎರಡೂ ದಿನಾಂಕಗಳು ಸೇರಿದಂತೆ) ಅರ್ಜಿ ಶುಲ್ಕ 550 ರು.ಗಳಾಗಿದೆ. ಆಸಕ್ತ ಅಭ್ಯರ್ಥಿಗಳು ಸಂಪೂರ್ಣ ವಿವರ ಮತ್ತು ಸೂಚನೆಗಳಿಗೆ ವೆಬ್‌ಸೈಟ್ https://agnipathvayu.cdac.in ನೋಡಬಹುದು. ವೆಬ್‌ಸೈಟ್‌ನಲ್ಲಿ ಜು.28ರ ತನಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಡಿಕೇರಿ ಇವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ರೇಖಾ ಗಣಪತಿ ತಿಳಿಸಿದ್ದಾರೆ.

ಮಾದಕ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಿರಿ: ಅಭಿಮನ್ಯು ಕುಮಾರ್

ಶನಿವಾರಸಂತೆ ಭಾರತಿ ಪ.ಪೂ.ಕಾಲೇಜಿನಲ್ಲಿ ಜನ ಜಾಗೃತಿ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಶನಿವಾರಸಂತೆ

ಜಾಗೃತಿ ಕಾರ್ಯಕ್ರಮದಲ್ಲಿ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಅಶೋಕ್ ಮಾಹಿತಿ ನೀಡುತ್ತಿರುವುದು.

ಮಾದಕ ವಸ್ತುಗಳ ಜಾಲ ಹಳ್ಳಿಹಳ್ಳಿಗಳಲ್ಲಿ ವ್ಯಾಪಿಸಿದ್ದು ಈ ವಿಚಾರದಲ್ಲಿ ವಿದ್ಯಾರ್ಥಿಗಳು ಜಾಗೃತರಾಗಿರಬೇಕು ಎಂದು ಕರ್ನಾಟಕ ಜನಜಾಗೃತಿ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಬಿ.ಅಭಿಮನ್ಯುಕುಮಾರ್‌ಹೇಳಿದರು.

ಅವರು ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಶನಿವಾರಸಂತೆ ಭಾರತಿ ಪ.ಪೂ.ಕಾಲೇಜಿನಲ್ಲಿ ಕರ್ನಾಟಕ ಜನಜಾಗೃತಿ ವೇದಿಕೆ ಕೊಡಗು ಜಿಲ್ಲಾ ಘಟಕದ ಸಹಭಾಗಿತ್ವದಲ್ಲಿ ನಡೆದ ಮಾಹಿತಿ ಜನಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಾದಕ ವಸ್ತುಗಳ ಜಾಲ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಿಸಿದ್ದು ಯುವ ಸಮೂಹ ಮಾದಕ ವಸ್ತುಗಳಂತಹ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗಬೇಕು. ಹಳ್ಳಿ ಹಳ್ಳಿಗಳಲ್ಲಿ ಮಾದಕ ವಸ್ತುಗಳ ವಿರುದ್ಧ ಜನರಿಗೆ ಅರಿವು ಮೂಡಿಸುವುದರಿಂದ ಮಾದಕ ವಸ್ತುಗಳ ಜಾಲವನ್ನು ತಡೆಗಟ್ಟಬಹುದಾಗಿದೆ ಎಂದರು

ಶನಿವಾರಸಂತೆ ವಿಘ್ನೇಶ್ವರ ಬಾಲಕಿಯರ ಪ್ರೌಢಶಾಲಾ ಶಿಕ್ಷಕ ಕೆ.ಪಿ.ಜಯಕುಮಾರ್‌ಮಾತನಾಡಿ, ವಿದ್ಯಾರ್ಥಿ ಮತ್ತು ಯುವ ಸಮೂಹ ಮಾದಕ ವಸ್ತುಗಳಿಗೆ ದಾಸರಾಗುತ್ತಿದ್ದಾರೆ. ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು ಸಹ ಮಾದಕ ವಸ್ತುಗಳಿಗೆ ಆಕರ್ಷಿತರಾಗುತ್ತಿರುವುದು ಕಳವಳಕಾರಿಯಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಜಾಗೃತರಾಗಿ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ವಿರುದ್ಧ ಜಾಗೃತರಾಗಿ ಇದನ್ನು ತಡೆಗಟ್ಟಲು ಪೊಲೀಸ್ ಇಲಾಖೆಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅಶೋಕ್ ಮಾತನಾಡಿ, ಮಾದಕ ವಸ್ತು ಸೇವನೆ ಸೇರಿದಂತೆ ಯಾವುದೇ ದುಶ್ಚಟಗಳಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂತಹ ದುಶ್ಚಟಗಳಿಂದ ಸಾವು ಸಂಭವಿಸುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಎಚ್ಚೆತ್ತುಕೊಂಡು ಯಾವುದೇ ದುಶ್ಚಟಗಳಿಂದ ದೂರ ಇರುವಂತೆ ಸಲಹೆ ನೀಡಿದರು.

ಮದ್ಯವರ್ಜನ ಶಿಬಿರದ ಅಧ್ಯಕ್ಷ ರಕ್ಷಿತ್, ಪ.ಪೂ.ಕಾಲೇಜಿನ ಪ್ರಾಂಶುಪಾಲ ಅಶೋಕ್ ಮಾತನಾಡಿದರು. ಈ ಸಂದರ್ಭ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ದುಶ್ಚಟಗಳ ವಿರುದ್ಧ ಜಾಗೃತಿ ಹಾಗೂ ಸದಾಚಾರಗಳ ಬಗ್ಗೆ ಅರಿವು ಮೂಡಿಸುವ ಪ್ರತಿಜ್ಞೆ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶನಿವಾರಸಂತೆ ವಲಯ ಮೇಲ್ವಿಚಾರಕಿ ಜಯಶ್ರೀ, ಒಕ್ಕೂಟದ ಅಧ್ಯಕ್ಷೆ ಶಾಹಿನ್ ತಾಜ್, ಸೇವಾ ಪ್ರತಿನಿಧಿ ಎಸ್.ಆರ್.ಶೋಭಾವತಿ, ವನಿತ, ಉಪನ್ಯಾಸಕಿ ಮಧು ಮುಂತಾದವರು ಹಾಜರಿದ್ದರು.

ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ಕಡೆಗಣನೆ: ಜೆಡಿಎಸ್ ಆರೋಪ

• **ಕನ್ನಡಪ್ರಭ ವಾರ್ತೆ** ಮಡಿಕೇರಿ

ಕಾಂಗ್ರೆಸ್ ಪಕ್ಷದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಅಲ್ಪಸಂಖ್ಯಾತರಿಗೆ ನಿಗಮ, ಮಂಡಳಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳನ್ನು ನೀಡದೆ ಕಡೆಗಣಿಸಲಾಗಿದೆ ಎಂದು ಕೊಡಗು ಜಿಲ್ಲಾ ಜಾತ್ಯತೀತ ಜನತಾದಳದ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಕೆ.ಜಿ.ಜಾಶಿರ್‌ಮೂರ್ನಾಡು ಆರೋಪಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೊಡಗು ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲು ಅಲ್ಪಸಂಖ್ಯಾತರ ಮತಗಳ ಕ್ರೋಢೀಕರಣವೇ ಕಾರಣವಾಗಿದೆ. ಸುಮಾರು 80 ಸಾವಿರ ಮುಸಲ್ಮಾನರು ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತ ಚಲಾಯಿಸಿಗೆಲುವುತಂದುಕೊಟ್ಟಿದ್ದಾರೆ. ಆದರೆ ಇತ್ತೀಚೆಗೆ ನೇಮಕಗೊಂಡ ಮೂಡ, ಕುಡಾ ಸೇರಿದಂತೆ ವಿವಿಧ ಆಡಳಿತಮಂಡಳಿಗಳಲ್ಲಿ ಮುಸಲ್ಮಾನರಿಗೆ ಸೂಕ್ತ ಪ್ರಾತಿನಿಧ್ಯ ನೀಡಿಲ್ಲವೆಂದು ಟೀಕಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಅಲ್ಪಸಂಖ್ಯಾತರಿಗೆ ನೀಡಬೇಕೆನ್ನುವ ಹಲವುವರ್ಷಗಳ ಬೇಡಿಕೆ ಇಲ್ಲಿಯವರೆಗೆ ಈಡೇರಿಲ್ಲ, ಮತಬ್ಯಾಂಕ್ ನ ಋಣ ಸಂದಾಯಕ್ಕಾಗಿ ಕೊಡಗಿನ ಅಲ್ಪಸಂಖ್ಯಾತರೊಬ್ಬರಿಗೆ ವಿಧಾನ ಪರಿಷತ್ ಸ್ಥಾನ ನೀಡಬೇಕಾಗಿತ್ತು. ಆದರೆ ಕಾಂಗ್ರೆಸ್ ಅದರ ಬಗ್ಗೆ ಆಸಕ್ತಿಯನ್ನೇ ತೋರಿಲ್ಲ, ಈ ಬಾರಿ ಮೂಡ ಅಧ್ಯಕ್ಷ ಸ್ಥಾನ ಅಲ್ಪಸಂಖ್ಯಾತರ ಪಾಲಾಗಲಿದೆ ಎನ್ನುವ ನಿರೀಕ್ಷೆ ಇತ್ತದರೂ ಇದು ಕೂಡ ಕೈತಪ್ಪಿ ಹೋಗಿದೆ ಎಂದರು.

ಕೆಲವು ವರ್ಷಗಳ ಹಿಂದೆ ಜೆಡಿಎಸ್ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಮುನೀರ್‌ಅಹಮ್ಮದ್ ಅವರಿಗೆ ಮೂಡ ಅಧ್ಯಕ್ಷ ಸ್ಥಾನ ನೀಡಲಾಗಿತ್ತು. ಜೆಡಿಎಸ್ ಪಕ್ಷದಲ್ಲಿ ಅಲ್ಪಸಂಖ್ಯಾತರು ಗುರುತಿಸಿಕೊಂಡಿದ್ದಾಗ ಸಮಾನ ಅವಕಾಶಗಳನ್ನು ನೀಡಲಾಗಿದೆ. ಅಲ್ಪಸಂಖ್ಯಾತರಿಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಿದ ಹೆಗ್ಗಳಿಕೆ ಜೆಡಿಎಸ್ ಪಕ್ಷದ್ದಾಗಿದೆ. ಆದರೆ ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರನ್ನು ಪ್ರಚಾರ, ಪ್ರತಿಭಟನೆ, ವಿಜಯೋತ್ಸವ, ಜನ್ಮ ದಿನೋತ್ಸವ ಮತ್ತು ಮತ ಬ್ಯಾಂಕ್ ಗಾಗಿ ಮಾತ್ರ ಬಳಸಿಕೊಳ್ಳುತ್ತಿದೆ ಎಂದು ಜಾಶಿರ್‌ಆರೋಪಿಸಿದ್ದಾರೆ.

ಕೇವಲ ಗೆಲುವಿಗಾಗಿ ತಮ್ಮನ್ನು ಬಳಸಿಕೊಳ್ಳುವ ಕಾಂಗ್ರೆಸ್ ಬಗ್ಗೆ ಇನ್ನಾದರು ಅಲ್ಪಸಂಖ್ಯಾತರು ಜಾಗೃತಗೊಳ್ಳಬೇಕಾಗಿದೆ. ಇಲ್ಲಿಯ ವರೆಗಿನ ರಾಜಕೀಯ ಬೆಳವಣಿಗೆಗಳ ಕುರಿತು ಆತ್ಮಾವಲೋಕನಮಾಡಿಕೊಂಡು ಪರ್ಯಾಯ ಶಕ್ತಿಯಾಗಿ ಜೆಡಿಎಸ್ ಪಕ್ಷದಲ್ಲಿ ಅಲ್ಪಸಂಖ್ಯಾತರು ಗುರುತಿಸಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಮಧುಸೂದನ್ ಪದಗ್ರಹಣ

• **ಕನ್ನಡಪ್ರಭ ವಾರ್ತೆ** ಮಡಿಕೇರಿ

Rotary Club M… Hills, Madikeri
INSTA…TION
ಮಡಿಕೇರಿ ಮಿಸ್ಟಿ ಹಿಲ್ಸ್ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಜಗತ್ತಿನಲ್ಲಿಯೇ ರೋಟರಿ ಕ್ರಿಯಾಶೀಲ ಸೇವಾ ಸಂಸ್ಥೆಯಾಗಿ ಖ್ಯಾತವಾಗಿದ್ದು, ರೋಟರಿಯ ಸಾಮಾಜಿಕ ಹೊಣೆಯನ್ನು ಯಶಸ್ವಿಯಾಗಿ ಮುಂದುವರಿಸುವ ಮಹತ್ವದ ಹೊಣೆಗಾರಿಕೆ ಸದಸ್ಯರೆಲ್ಲರ ಮೇಲಿದೆ ಎಂದು ಮೈಸೂರಿನ ಉದ್ಯಮಿ, ರೋಟರಿ ಪ್ರಮುಖ ಯಶಸ್ವಿ ಸೋಮಶೇಖರ್‌ಕರೆ ನೀಡಿದ್ದಾರೆ.

ನಗರದ ಗೌಡ ಸಮಾಜದ ಸಭಾಂಗಣದಲ್ಲಿ ರೋಟರಿ ಮಡಿಕೇರಿ ಮಿಸ್ಟಿ ಹಿಲ್ಸ್ ಅಧ್ಯಕ್ಷರಾಗಿ ಪೊನ್ನಚ್ಚನ ಮಧುಸೂದನ್ ಮತ್ತು ಕಾರ್ಯದರ್ಶಿಯಾಗಿ ಕಟ್ಟೆಮನೆ ಸೋನಜಿತ್ ಅವರಿಗೆ ಪದಗ್ರಹಣ ನೆರವೇರಿಸಿ ಅವರು ಮಾತನಾಡಿದರು.

ಜಾಗತಿಕವಾಗಿ 119 ವರ್ಷಗಳ ಭವ್ಯ ಇತಿಹಾಸ ಹೊಂದಿರುವ ರೋಟರಿ ಸಂಸ್ಥೆ ಪ್ರತೀ ವರ್ಷ ಕೋಟ್ಯಾಂತರ ಜನರಿಗೆ ಸೇವೆ ಮೂಲಕ ನೆರವು ನೀಡುತ್ತಲೇ ಬಂದಿದೆ, ರೋಟರಿ ಸದಸ್ಯರು ನೀಡುವ ದೇಣಿಗೆ ಜಗತ್ತಿನ ಯಾವುದೋ ಒಂದು ಭಾಗದಲ್ಲಿ ಸಂತ್ರಸ್ತರಿಗೆ ತಲುಪುತ್ತಿದೆ ಎಂದು ಸೋಮಶೇಖರ್ ಹೇಳಿದರು.ರೋಟರಿ ಸಂಸ್ಥೆ ಸಾಮಾಜಿಕ ಜವಬ್ದಾರಿಯುಳ್ಳ, ಸಮಾಜಸೇವೆ ಕಳಕಳಿಯುಳ್ಳ ನಿಸ್ವಾರ್ಥ ಮನೋಭಾವದ ಸಮಾಜದ ಎಲ್ಲಾ ವರ್ಗಕ್ಕೆ ಸೇರಿರುವ ಸದಸ್ಯರನ್ನು ಹೆಚ್ಚಾಗಿ ಬಯಸುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ರೋಟರಿ ಮಿಸ್ಟಿ ಹಿಲ್ಸ್ ನೂತನ ಅಧ್ಯಕ್ಷ ಪೊನ್ನಚ್ಚನ ಮಧುಸೂದನ್ ಮಾತನಾಡಿ, 65 ಸದಸ್ಯ ಬಲದ ಮಿಸ್ಟಿ ಹಿಲ್ಸ್ 19 ವರ್ಷಗಳಲ್ಲಿ ಸೇವಾಸಾಧನೆಗಾಗಿ ಖ್ಯಾತವಾಗಿದ್ದು ಮತ್ತಷ್ಟು ನೂತನ ಯೋಜನೆಗಳ ಮೂಲಕ ಈ ಸೇವಾ ಪರಂಪರೆ ಮುಂದುವರಿಸಿಕೊಂಡು ಹೋಗುವುದಾಗಿ ಭರವಸೆ ನೀಡಿದರು,

ರೋಟರಿ ಸಹಾಯಕ ಗವರ್ನರ್‌ದೇವಣಿರ ಕಿರಣ್ ಮತ್ತು ವಲಯ ಸೇನಾನಿ ಅನಿತಾ ಪೂವಯ್ಯ, ಈ ವರ್ಷದ ರೋಟರಿಯ ಸೇವಾ ಯೋಜನೆಗಳ ಮಾಹಿತಿ ನೀಡಿದರು. ಎಸ್.ಎಂ. ಚೇತನ್ ಸಂಪಾದಕತ್ವದಲ್ಲಿ ಪ್ರಕಟಿತ ರೋಟೋ ಮಿಸ್ಟ್ ವಾರ್ತಾ ಸಂಚಿಕೆಯನ್ನು ಅತಿಥಿಗಳು ಬಿಡುಗಡೆಗೊಳಿಸಿದರು.

ರೋಟರಿ ಸಂಸ್ಥೆಗೆ ಮೇಜರ್‌ಡೋನರ್‌ಆದ ಮಿಸ್ಟಿ ಹಿಲ್ಸ್ ನಿದೇ9ಶಕ ಡಾ. ಚೆರಿಯಮನೆ ಪ್ರಶಾಂತ್ ಅವರನ್ನು ಗೌರವಿಸಲಾಯಿತು. ನೂತನ ಸದಸ್ಯರಾಗಿ ಮನೋಜ್ ಕುಮಾರ್‌ಅವರನ್ನು ಸೇರ್ಪಡೆಗೊಳಿಸಲಾಯಿತು.

ಮಿಸ್ಟಿ ಹಿಲ್ಸ್ ನಿಕಟಪೂರ್ವ ಅಧ್ಯಕ್ಷ ಪ್ರಮೋದ್ ಕುಮಾರ್‌ರೈ, ಕಾರ್ಯದರ್ಶಿ ರತ್ನಾಕರ್‌ರೈ ವೇದಿಕೆಯಲ್ಲಿದ್ದರು.

ರೋಟರಿ ಜಿಲ್ಲೆ 3181 ನ ಮಾಜಿ ಗವರ್ನರ್‌ಗಳಾದ ರವೀಂದ್ರ ಭಟ್, ಸುರೇಶ್ ಚಂಗಪ್ಪ, ಡಾ.ರವಿ ಅಪ್ಪಾಜಿ, ನಿಯೋಜಿತ ಗವರ್ನರ್‌ಸತೀಶ್ ಬೋಳಾರ್‌ಸೇರಿದಂತೆ ರೋಟರಿ ಪ್ರಮುಖರು ಹಾಜರಿದ್ದರು, ಕಟ್ಟೆಮನೆ ಸೋನಜಿತ್ ವಂದಿಸಿದರು. ಮಿಸ್ಟಿ ಹಿಲ್ಸ್ ಪ್ರಮುಖ ಬಿ.ಜಿ. ಅನಂತಶಯನ, ಅನಿಲ್ ಎಚ್.ಟಿ., ಬಿ.ಕೆ. ರವೀಂದ್ರ ರೈ, ಕಪಿಲ್ ಕುಮಾರ್, ಕೆ.ಎಂ. ಪೂಣಚ್ಚ, ಲೀನಾ ಪೂವಯ್ಯ ನಿರ್ವಹಿಸಿದರು.

ಬೊಮ್ಮಂಜಿ ಕೇರಿ- ಕೋಟೇರಿ ರಸ್ತೆ ಬದಿ ಒತ್ತುವರಿ ವಿವಾದ

ತೆರವಿಗೆ ಗ್ರಾಮಸ್ಥರ ಆಗ್ರಹ | ಮನವೊಲಿಕೆ ಮೂಲಕ ಸಮಸ್ಯೆ ಪರಿಹಾರಕ್ಕೆ ಪಂಚಾಯಿತಿ ಒಲವು

• **ಕನ್ನಡಪ್ರಭ ವಾರ್ತೆ** ನಾಪೋಕ್ಲು

ಕೋಟೇರಿ ರಸ್ತೆಯ ವ್ಯಕ್ತಿ ರಸ್ತೆಯನ್ನು ಅತಿಕ್ರಮಣ ಮಾಡಿರುವ ಬೇಲಿ.

> **ಒತ್ತುವರಿದಾರರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾದರೆ, ವ್ಯಾಜ್ಯ ತೀರ್ಮಾನವಾಗಲು ಸಾಕಷ್ಟು ಸಮಯ ಬೇಕಾಗುತ್ತದೆ. ಈ ಸಮಯದಲ್ಲಿ ಪಂಚಾಯಿತಿ ಆಡಳಿತ ಮಂಡಳಿಯೂ ಬದಲಾಗಿ, ಪಿಡಿಒಗಳೂ ವರ್ಗವಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಮಾನವೀಯ ನೆಲೆಯಲ್ಲಿ ಒತ್ತುವರಿದಾರರ ಮನವೊಲಿಸಿ ತೆರವುಗೊಳಿಸಲು ನಿರ್ಧರಿಸಲಾಗಿದೆ.**
>
> • **ಕುಲ್ಲೇಟಿರ ಅರುಣ್ ಬೇಬ** ಗ್ರಾಮ ಪಂಚಾಯಿತಿ ಸದಸ್ಯ

ನಾಪೋಕ್ಲಿನಲ್ಲಿ ವ್ಯಕ್ತಿಯೊಬ್ಬರು ಸಾರ್ವಜನಿಕ ರಸ್ತೆ ಬದಿ ಅಕ್ರಮ ಬೇಲಿ ಅಳವಡಿಸಿ ಜಾಗ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನಾಗರಿಕರು ದೂರಿಕೊಂಡಿದ್ದು, ಪಂಚಾಯಿತಿ ಪ್ರತಿನಿಧಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದು, ಜನರ ಮುಂದೆ ತಮ್ಮ ಅಸಹಾಯಕತೆ ತೋಡಿಕೊಂಡಿದ್ದಾರೆ.

ಸಾರ್ವಜನಿಕರ ಸಹಕಾರವಿಲ್ಲದೆ ಒತ್ತುವರಿ ತೆರವು ಸಾಧ್ಯವಿಲ್ಲ, ಜನರು, ಪೊಲೀಸರು ಮತ್ತು ಪಂಚಾಯಿತಿಯ ಸಹಯೋಗದಲ್ಲಿ ಮಾತ್ರ ತೆರವು ಸಾಧ್ಯ ಎಂದು ಪಂಚಾಯತಿ ಪ್ರತಿನಿಧಿಗಳು ಹೇಳಿದರೆ, ಗ್ರಾಮ ಪಂಚಾಯಿತಿ ತನಗಿರುವ ಅಧಿಕಾರ ಚಲಾಯಿಸಬೇಕೆಂದು ಸಾರ್ವಜನಿಕರು ವಾದಿಸಿದರು. ಕಕ್ಕಬ್ಬೆ- ನಾಪೋಕ್ಲು ಸಂಪರ್ಕ ರಸ್ತೆಯಿಂದ ಕವಲೊಡೆಯುವ ಹಳೆ ತಾಲೂಕಿನಲ್ಲಿ ಬೊಮ್ಮಂಜಿಕೇರಿ , ಕೋಟೇರಿ ರಸ್ತೆಯ ವ್ಯಕ್ತಿಯೊಬ್ಬರು ಮಂಗಳವಾರ ಜಾಗ ಒತ್ತುವರಿ ಮಾಡಿಕೊಂಡಿದ್ದು, ಇದರಿಂದ ವಾಹನ ಸಂಚಾರ, ಪಾದಚಾರಿಗಳಿಗೆ ತೊಂದರೆಯಾಗಿದೆ ಎಂದು ಆರೋಪಿಸಿ ನಾಗರಿಕರು ಪಂಚಾಯಿತಿಗೆ ಲಿಖಿತ ದೂರು ಸಲ್ಲಿಸಿದ್ದರು. ಬುಧವಾರ ಸ್ಥಳಕ್ಕೆ ಬಂದ ಪಂಚಾಯಿತಿ ಪ್ರತಿನಿಧಿಗಳು, ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಆದರೆ, ಪಂಚಾಯಿತಿ ಪ್ರತಿನಿಧಿಗಳು ಮತ್ತು ಸ್ಥಳೀಯರ ಮಧ್ಯೆ ಮಾತಿನ ಚಕಮಕಿಯೇ ನಡೆಯಿತು.

ಈ ಕುರಿತು ಮಾತನಾಡಿರುವ ಕಾಫಿ ಬೆಳೆಗಾರ ಬಿದ್ದಾಟಂಡ ದಿನೇಶ್, ಒಂದು ಸಾಮಾಜಿಕ ಸುವ್ಯವಸ್ಥೆಗಾಗಿ ಕಾನೂನು ಇದೆ. ಅದನ್ನು ಎಲ್ಲರೂ ಪಾಲನೆ ಮಾಡಬೇಕು. ಇಲ್ಲಿ ಕಾನೂನು ಉಲ್ಲಂಘಿಸಿ ರಸ್ತೆ ಅತಿಕ್ರಮಣ ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿ ಸದಸ್ಯರು ಅಧಿಕಾರ ಚಲಾಯಿಸಿ ತೆರವುಗೊಳಿಸಬೇಕು ಎಂದರು. ಒತ್ತುವರಿದಾರರು ನ್ಯಾಯಾಲಯದ ಮೆಟ್ಟಿಲೇರಿದರೆ ಪ್ರಕರಣ ಇತ್ಯರ್ಥವಾಗಲು ಸುದೀರ್ಘ ಸಮಯ ಹಿಡಿಯುತ್ತದೆ. ಅಲ್ಲದೆ, ಜಿಲ್ಲಾ ಮತ್ತು ತಾಲೂಕು ಪಂಚಾಯ್ತಿಗಳಿಗೂ ಒತ್ತುವರಿ ತಡೆಯಲು ಜವಾಬ್ದಾರಿಯಿದೆ ಎಂದು ಅವರು ಹೇಳಿದರು.

ಮತ್ತೋರ್ವ ಬೆಳೆಗಾರ ಬಿದ್ದಾಟಂಡ ತಮ್ಮಯ್ಯ ಮಾತನಾಡಿ, ಗ್ರಾಮ ಪಂಚಾಯಿತಿಯವರು ಕಾನೂನು ಮಿತಿಯಲ್ಲಿ ಕಾರ್ಯನಿರ್ವಹಿಸಬೇಕು. ಜಿಲ್ಲಾ ಪಂಚಾಯಿತಿ ಇಂಜಿನಿಯರ್‌ಸ್ಥಳಕ್ಕೆ ಆಗಮಿಸಿ, ರಸ್ತೆ ಮಾರ್ಜಿನ್ ಗುರುತು ಮಾಡಿ ಕಾನೂನು ಪ್ರಕಾರ ಕೈಗೊಳ್ಳಲಿ ಎಂದರು.

ಗ್ರಾಮ ಪಂಚಾಯಿತಿ ಸದಸ್ಯ ಅರುಣ್ ಬೇಬ ಪ್ರತಿಕ್ರಿಯಿಸಿ,ಸಮಸ್ಯೆ ಪರಿಹಾರಕ್ಕೆತೋಟದಮಾಲೀಕರ ಸಹಕಾರ ಬೇಕು. ರಸ್ತೆಗೆ ಸಂಬಂಧಿಸಿದ ಕಾನೂನು ತೊಡಕು ನಿವಾರಣೆಗೆ ಸಾರ್ವಜನಿಕರು ಸಹಕರಿಸಬೇಕು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್ ಮಾತನಾಡಿ, ಈ ರಸ್ತೆಯಲ್ಲಿ ಸುಮಾರು ಜನ ಅತಿಕ್ರಮಣ ಮಾಡಿಕೊಂಡಿದ್ದು ಪಂಚಾಯಿತಿಯಿಂದ ಎಲ್ಲರಿಗೂ ನೋಟಿಸ್ ನೀಡಿ ಕೂಡಲೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಒತ್ತುವರಿಯಾಗಿರುವ ಎಲ್ಲ ಜಾಗಗಳನ್ನು ತೆರವುಗೊಳಿಸಿದರೆ, ತಾವೂ ತೆರವುಗೊಳ್ಳಲು ಸಿದ್ಧ ಎಂದು ಒತ್ತುವರಿದಾರರು ಹೇಳಿದರು.

ಬೇತು, ಕೊಳಕೇರಿವರೆಗೂ ಒತ್ತುವರಿಯಾಗಿದ್ದು ಅಂಥವರಿಗೆ ಅರಿವು ಮೂಡಿಸಿ ತೆರವುಗೊಳಿಸಿ ಎಂದು ನಾಗರಿಕರು ಒತ್ತಾಯಿಸಿ ಜಿಲ್ಲೆಯಾದ್ಯಂತ ರಸ್ತೆ ಒತ್ತುವರಿ ತೆರವುಗೊಳಿಸಲು ಜಿಲ್ಲಾಧಿಕಾರಿ ಆದೇಶ ನೀಡಬೇಕೆಂದು ಜನರು ಆಗ್ರಹಿಸಿದರು. ಕೆಲವು ರಸ್ತೆಗಳು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿದ್ದು, ಒತ್ತುವರಿ ಬಗ್ಗೆ ಆಯಾ ಇಲಾಖೆಯೇ ಗಮನ ಹರಿಸಬೇಕು. ಕಟ್ಟಡ ನಿರ್ಮಾಣಮಾಡುವಾಗ ರಸ್ತೆ ಪರಿಧಿ ಕಾನೂನು ಬದ್ಧವಾಗಿ ಬಿಡಬೇಕು ಎಂದು ಪಂಚಾಯಿತಿ ಸದಸ್ಯರು ಹೇಳಿದರು.

ಗ್ರಾಮ ಪಂಚಾಯತಿ ಸದಸ್ಯ ಕುರೈಸಿ, ಮಹಮ್ಮದ್, ಗ್ರಾಮಸ್ಥರಾದ ಬಿದ್ದಾಟಂಡ ಜೀವನ್ ಕಾರ್ಯಪ್ಪ, ನೀಡುಮಂಡ ಕೃತಿ, ಅಪ್ಪಚ್ಚರ ರಮ್ಮಿ ನಾಣಯ್ಯ, ಅಪ್ಪಾರಂಡ ಸುಭಾಷ್ ತಿಮ್ಮಯ್ಯ ,ಬೋಟ್ಟೋಳಂಡ ಕುಮಾರ್, ಪುಳ್ಳೆರ ದಾದಾ, ಪುಳ್ಳೆರ ಅರುಣ, ಪಟ್ರಪಂಡ ಶರೀನ್, ನೀರನ್,ಅಚ್ಚಂಡ್ರ ಅಪ್ಪಚ್ಚ, ಕೋಟೆ ಮನು, ರಾಜಪ್ಪ, ದಿನೇಶ್ ಮತ್ತಿತರರಿದ್ದರು.

ಗಸ್ತು ಪೊಲೀಸರು ಸ್ಥಳಕ್ಕೆ ಆಗಮಿಸಿ ಬಂದೋಬಸ್ತು ನಡೆಸಿದರು.

ಸೋಮೇಶ್ವರ ಪುರಸಭಾ ಕಾರ್ಯಾಲಯ
ಅಂಚೆ : ಕೋಟೆಕಾರ್-575022 ಉಳ್ಳಾಲ ತಾಲೂಕು, ದಕ್ಷಿಣಕನ್ನಡಜಿಲ್ಲೆ
ದೂರವಾಣಿ : 0824 -2466572 ಈಮೇಲ್: co.someshwar@gmail.com
ನಂಬ್ರ:ಸೋ.ಪು.ಸ/ಹಿ.ಆ.ನಿ/8/2024-25 ದಿನಾಂಕ : 27-06-2024

ಕೊಟೇಶನ್ ಪ್ರಕಟಣೆ

ಸೋಮೇಶ್ವರ ಪುರಸಭಾ ವ್ಯಾಪ್ತಿಯಲ್ಲಿ ಮನೆ-ಮನೆಯಿಂದ ಒಣ ಕಸವನ್ನು ಸಂಗ್ರಹಿಸಲು ಗೋಣಿಚೀಲವನ್ನು ನೀಡಬೇಕಾಗಿದ್ದು ಸದ್ರಿ ಗೋಣಿ ಚೀಲದಲ್ಲಿ ಪುರಸಭೆಯ ಹೆಸರನ್ನು ಮುದ್ರಿಸಿ ಚೀಲದಲ್ಲಿ ಯಾವ ಯಾವ ವಸ್ತುಗಳನ್ನು ಹಾಕುವುದು ಎಂಬ ಪಟ್ಟಿಯನ್ನು ಮುದ್ರಿಸಿ 2000 ಗೋಣಿಚೀಲವನ್ನು ಮುದ್ರಿಸಿ ಒದಗಿಸಲು ಕೊಟೇಷನ್ ಕರೆಯಲಾಗಿದ್ದು ಸದ್ರಿ ಕೊಟೇಷನನ್ನು ಹಾಕಲು ಕೊನೆಯ ದಿನಾಂಕ : 06-07-2024 ರಂದು ಅದೇ ದಿನ ಸಂಜೆ ಕೊಟೇಶನುದಾರರ ಸಮ್ಮುಖದಲ್ಲಿ ಕೊಟೇಷನ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸೋಮೇಶ್ವರ ಪುರಸಭೆಯ ಆರೋಗ್ಯ ವಿಭಾಗವನ್ನು ಸಂಪರ್ಕಿಸುವುದು ಕಛೇರಿ ಸಮಯದಲ್ಲಿ.

ಸಹಿ/- ಮುಖ್ಯಾಧಿಕಾರಿ,
ಸೋಮೇಶ್ವರ ಪುರಸಭೆ, ದ.ಕ.

ಕರ್ನಾಟಕ ರಾಜ್ಯ ಪೊಲೀಸ್,
ಪೊಲೀಸ್ ಇನ್ಸ್‌ಪೆಕ್ಟರ್, ಆರ್ಥಿಕ ಅಪರಾಧ ದಳ,
ಕೇಂದ್ರ ಅಪರಾಧ ವಿಭಾಗ(ಸಿಸಿಬಿ), ಬೆಂಗಳೂರು

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶುಶ್ರುತಿ ಸೌಹಾರ್ದ ಸಹಕಾರ ನಿಯಮಿತ ಬ್ಯಾಂಕ್ ಹೆಸರಿನಲ್ಲಿ ಆರೋಪಿಗಳಾದ **ಶ್ರೀನಿವಾಸಮೂರ್ತಿ. ಎನ್, ಶ್ರೀಮತಿ. ಧಾರಿಣಿದೇವಿ, ಶ್ರೀಮತಿ. ಮೋಕ್ಷತಾರ, ಲಕ್ಷ್ಮಿನಾರಾಯಣ, ಡಾ॥ ಪ್ರಶಾಂತ್, ಉಮಾ.ಕೆ ಹಾಗೂ ಪ್ರಶಾಂತ್‌ಕುಮಾರ್ ಹಾಗೂ ನಿರ್ದೇಶಕರು** ಇತರರು ಹೆಚ್ಚಿನ ಲಾಭಾಂಶವನ್ನು ನೀಡುವುದಾಗಿ ಸಾರ್ವಜನಿಕರಿಂದ ಕೋಟ್ಯಾಂತರ ರೂಗಳನ್ನು ಹೂಡಿಕೆ ಮಾಡಿಸಿಕೊಂಡು ಮೋಸ ಮಾಡಿದ್ದು ಅಲ್ಲದೇ **ಸುರೇಶ್.ಹೆಚ್.ಎಸ್, ವೇಣು.ವಿ, ಮಂಜುನಾಥ್.ಎಸ್, ಗಂಗಾಧರ.ಎನ್ ಹಾಗೂ ಇತರೆ ಸಾಲಗಾರರು** ಸಾಲ ಪಡೆದು ಮರುಪಾವತಿ ಮಾಡದೇ ಬ್ಯಾಂಕ್ ಅಧ್ಯಕ್ಷರೊಂದಿಗೆ ಸೇರಿಕೊಂಡು ಬ್ಯಾಂಕ್‌ಗೆ ಮೋಸ ಮಾಡಿದ್ದು, ಈ ಬಗ್ಗೆ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಹಾಗೂ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಒಟ್ಟು ನಾಲ್ಕು ಪ್ರಕರಣಗಳು ದಾಖಲಾಗಿದ್ದು, ಸಿಸಿಬಿ, ಆರ್ಥಿಕ ಅಪರಾಧ ದಳ, ಬೆಂಗಳೂರು ನಗರದಲ್ಲಿ ತನಿಖೆಯಲ್ಲಿ ಇರುತ್ತದೆ.

ಈ ಪ್ರಕರಣದ ಆರೋಪಿಗಳಾದ ಶ್ರೀನಿವಾಸಮೂರ್ತಿ. ಎನ್, ಶ್ರೀಮತಿ. ಧಾರಿಣಿದೇವಿ, ಶ್ರೀಮತಿ. ಮೋಕ್ಷತಾರ, ಲಕ್ಷ್ಮಿನಾರಾಯಣ, ಡಾ॥ ಪ್ರಶಾಂತ್, ಉಮಾ.ಕೆ ಹಾಗೂ ಪ್ರಶಾಂತ್‌ಕುಮಾರ್ ಹಾಗೂ ಬ್ಯಾಂಕ್ ನಿರ್ದೇಶಕರು, ಸಾಲಗಾರರಾದ ಸುರೇಶ್.ಹೆಚ್.ಎಸ್, ವೇಣು.ವಿ, ಮಂಜುನಾಥ್.ಎಸ್, ಗಂಗಾಧರ.ಎನ್ ಹಾಗೂ ಇತರೆ ಸಾಲಗಾರರ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡು, ಕೆ.ಪಿ.ಐ.ಡಿ ಕಾಯಿದೆ-2016ರಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳ ಬಗ್ಗೆ ಮಾಹಿತಿ ತಿಳಿಸಿದಲ್ಲಿ ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು. ಹಾಗೂ ಈ ಆರೋಪಿಗಳ ಬಳಿ ಹಣ ಹೂಡಿಕೆ ಮಾಡಿ ಹಣ ಕಳೆದುಕೊಂಡಿರುವವರು ಇದ್ದಲ್ಲಿ ಈ ಕೆಳಕಂಡ ಅಧಿಕಾರಿಯವರಿಗೆ ಮಾಹಿತಿ ನೀಡಲು ಕೋರಿದೆ.

ಸಹಿ/- ಸಂತೋಷ್ ರಾಮ್.ಆರ್, ಪೊಲೀಸ್ ಇನ್ಸ್‌ಪೆಕ್ಟರ್,
ಆರ್ಥಿಕ ಅಪರಾಧ ದಳ, ಸಿಸಿಬಿ, ಬೆಂಗಳೂರು. ಮೊ: 9480801562

ಭಾರತೀಯ ಸ್ಟೇಟ್ ಬ್ಯಾಂಕ್
ಬಿ ಎಂ ರಸ್ತೆ ಕುಶಾಲನಗರ ಶಾಖೆ (40388),
ಬೆಂಗಳೂರು-ಮಂಗಳೂರು ರಸ್ತೆ, ಕುಶಾಲನಗರ, ಕೊಡಗು ಜಿಲ್ಲೆ.

ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 (ಎಸ್‌ಎಆರ್‌ಎಫ್‌ಎಇಎಸ್‌ಐ) ಪ್ರಕರಣ 13 (2) ರ ಅನ್ವಯ ನೋಟೀಸ್

ಭಾರತೀಯ ಸ್ಟೇಟ್ ಬ್ಯಾಂಕ್ ಆದ ನಾವು ಕೆಳಕಂಡ ನಮಗೆ ಸೆಕ್ಯೂರಿಟೈಜೇಸನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರ ಪ್ರಕರಣ 13(2) ರ ಅನ್ವಯ ಬ್ಯಾಂಕ್ ನಿಮ್ಮಗಳ ಕಡತ ಮಾಹಿತಿಗಳಿಂದ ನಿಮ್ಮ ವಿಳಾಸಗಳನ್ನು ತೆಗೆದುಕೊಂಡು ನಿಮ್ಮ ವಿಳಾಸಗಳಿಗೆ ಬ್ಯಾಂಕ್ ಡಿಮ್ಯಾಂಡ್ ನೋಟೀಸ್‌ನ್ನು ನೀಡಿತ್ತು. ಆದರೆ ಸದರಿ ನೋಟಿಸ್ ನಿಮಗೆ ನೀಡಿಕೆಯಾಗಿಲ್ಲ ಹಾಗೂ ನೋಟಿಸ್ ಬ್ಯಾಂಕಿಗೆ ಹಿಂದಕ್ಕೆ ಬಂದಿದೆ. ನಮ್ಮ **ಭಾರತೀಯ ಸ್ಟೇಟ್ ಬ್ಯಾಂಕ್‌ಗೆ ಸಂಬಂಧಪಟ್ಟ ಈ ಕೆಳಕಂಡ ಶಾಖೆಯಿಂದ** ನಿಮಗೆ ಮಂಜೂರು ಮಾಡಿದ್ದ ಸಾಲವನ್ನು ಮರುಪಾವತಿ ಮಾಡಲು ನೀವುಗಳು ವಿಫಲವಾಗಿರುವುದರಿಂದ ಸದರಿ ನೋಟಿಸ್‌ನಲ್ಲಿ ಒಕ್ಕಣೆಯಾಗಿರುವುದು. ಸಾಲದ ವಿವರಗಳು ಮತ್ತು ಬಾಕಿಯಾಗಿರುವ ಮೊತ್ತ ಕೆಳಕಂಡಂತಿದೆ.

ಶಾಖೆ : ಬಿ ಎಂ ರಸ್ತೆ ಕುಶಾಲನಗರ ಶಾಖೆ, ಕೊಡಗು ಜಿಲ್ಲೆ : ಸಾಲಗಾರರು : ಶ್ರೀ ಡಿ ಎಂ ಗಂಗಾಧರ್, 2703, 3ನೇ ತಿರುವು, 7ನೇ ಮುಖ್ಯ, ಸ್ನೇಕ್‌ಶ್ಯಾಮ್ ರಸ್ತೆ, 2ನೇ ಹಂತ, ವಿಜಯನಗರ, ಮೈಸೂರು-570017. ಡಿಮ್ಯಾಂಡ್ ನೋಟೀಸ್‌ನ ದಿನಾಂಕ: **25.06.2024.** ಖಾತಾ ನಂ : **ABAL- 42013679948.** ಎನ್.ಪಿ.ಎ. ದಿನಾಂಕ : **29.05.2024.** ದಿನಾಂಕ **25.06.2024** ರಂದು ಬಾಕಿ ಇರುವ ಮೊತ್ತ : **ರೂ.9,28,453/-(ರೂಪಾಯಿ: ಒಂಬತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ನಾಲ್ಕು ನೂರ ಐವತ್ತಮೂರು ಮಾತ್ರ)** + 25.06.2024 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಅನ್ವಯಿಸುತ್ತದೆ. **ಸ್ಥಿರಾಸ್ತಿಯ ವಿವರ :** ಕೊಡಗು ಜಿಲ್ಲೆ, ಕುಶಾಲನಗರ ಹೋಬಳಿ ಮತ್ತು ತಾಲ್ಲೂಕು, ಮುಲ್ಲುಸೋಗೆ ಗ್ರಾಮ ಪಂಚಾಯತ್, ಮುಲ್ಲುಸೋಗೆ ಗ್ರಾಮದಲ್ಲಿರುವ ಸ್ವತ್ತಿನ ಐಡಿ ನಂ. 151800208300421754, ಸರ್ವೇ ನಂ. 31/1ಪಿ1 ರ ವಿಸ್ತೀರ್ಣ : 202.34 ಚದರ ಮೀಟರ್ಸ್ (5.00 ಸೆಂಟ್ಸ್) ಖಾಲಿ ನಿವೇಶನ. **ಚಕ್ಕುಬಂದಿ : ಪೂರ್ವಕ್ಕೆ :** ಸರ್ವೇ ನಂ. 31/1ಪಿ1 & ಸರ್ವೇ ನಂ. 3/3. **ಪಶ್ಚಿಮಕ್ಕೆ :** ಸರ್ವೇ ನಂ. 31/1ಪಿ1 & ಸರ್ವೇ ನಂ. 3/2 ರ ಉಳಿಕೆ ಭೂಮಿ. **ಉತ್ತರಕ್ಕೆ :** ಸರ್ವೇ ನಂ. 31/1ಪಿ1 & ಸರ್ವೇ ನಂ. 3/1. **ದಕ್ಷಿಣಕ್ಕೆ :** ರಸ್ತೆ.

ಸದರಿ ನೋಟಿಸ್ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗೆ ಮೇಲೆ ತಿಳಿಸಿರುವ ಸಂಬಂಧಪಟ್ಟ ಮೊತ್ತಗಳನ್ನು **ಭಾರತೀಯ ಸ್ಟೇಟ್ ಬ್ಯಾಂಕ್, ಮೇಲೆ ತಿಳಿಸಿರುವ ಶಾಖೆಗೆ** ಪಾವತಿ ಮಾಡುವಂತೆ ಮತ್ತು ಇದಕ್ಕೆ ತಪ್ಪಿದಲ್ಲಿ ಸಾಲಗಾರರು ಮತ್ತು ಜಾಮೀನುದಾರರ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೇರಿದಂತೆ, ಸದರಿ ಅಧಿನಿಯಮದ ಉಪಬಂಧಗಳ ಅನ್ವಯ ಭದ್ರತಾ ಸ್ವತ್ತುಗಳ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವುದಾಗಿ ನಿಮಗೆ ಈ ಮೂಲಕ ಕರೆ ನೀಡಲಾಗಿದೆ. ಅಧಿನಿಯಮದ ಅನ್ವಯ **ಭಾರತೀಯ ಸ್ಟೇಟ್ ಬ್ಯಾಂಕ್, ಮೇಲೆ ತಿಳಿಸಿರುವ ಶಾಖೆ** ಇವರಿಗೆ ದೊರೆಯುವ ಅಧಿಕಾರಗಳಲ್ಲಿ ಇವು ಒಳಗೊಂಡಿರುತ್ತದೆ. 1) ಗುತ್ತಿಗೆ, ನಿಯೋಜನೆ ಮಾರಾಟ ಮತ್ತು ಭದ್ರತೆಯುಳ್ಳ ಸ್ವತ್ತುಗಳನ್ನು ಪಡೆಯುವಿಕೆ ಮೂಲಕ ವರ್ಗಾವಣೆ ಹಕ್ಕುಗಳು ಸೇರಿದಂತೆ ಸಾಲಗಾರರು/ಜಾಮೀನುದಾರರು **ಭಾರತೀಯ ಸ್ಟೇಟ್ ಬ್ಯಾಂಕ್ ಮೇಲೆ ತಿಳಿಸಿರುವ ಶಾಖೆಗೆ** ಭದ್ರತೆಯುಳ್ಳ ಸ್ವತ್ತುಗಳ ವರ್ಗಾವಣೆಯ ಸಂಬಂಧದಲ್ಲಿ ಅಥವಾ ಅದರಲ್ಲಿ ವರ್ಗಾವಣೆ ಪಡೆದವರಿಗೆ ವರ್ಗಾವಣೆಯನ್ನು ನೀವೇ ಮಾಡಿರುವಿರಿ ಎಂಬ ಎಲ್ಲಾ ಹಕ್ಕುಗಳನ್ನು ಹೊಂದಿರುವರು, ಡಿಮ್ಯಾಂಡ್ ನೋಟೀಸ್‌ನಲ್ಲಿ ತಿಳಿಸಿರುವ ಯಾವುದೇ ಸ್ವತ್ತುಗಳು ಹಾಗೂ ಬ್ಯಾಂಕಿಗೆ ಈಡು ಮಾಡಿರುವ ಆಧಾರ ಮಾಡಿರುವ ಸ್ವತ್ತುಗಳನ್ನು ಬ್ಯಾಂಕಿನ ಪೂರ್ವಾನುಮತಿ ಪಡೆಯದೆ ಪರಬಾರೆ, ಮಾರಾಟ, ಗುತ್ತಿಗೆ, ಗೇಣಿ ಅಥವಾ ಇನ್ನಿತರೆ ರೂಪದಲ್ಲಿ (ನಿಮ್ಮ ವ್ಯವಹಾರದ ಸಾಮಾನ್ಯ ವಿಧಾನದ ಹೊರತಾಗಿ ವರ್ಗಾವಣೆ ಮಾಡದಂತೆ ಅಧಿನಿಯಮದ ಕಲಂ 13(13)ರ ಉಪಬಂಧಗಳ ಅನ್ವಯ ಈ ಮೂಲಕ ನಿಮ್ಮನ್ನು ನಿಷೇಧಿಸಿದೆ. ಸದರಿ ಅಧಿನಿಯಮದ ಪ್ರಕರಣ 13(2) ರ ಅನ್ವಯ ಈ ನೋಟೀಸ್ ಜಾರಿ ಮಾಡಲಾಗಿದೆ.

ಸ್ಥಳ: ಕೊಡಗು
ದಿನಾಂಕ: 12.07.2024
ಸಹಿ/- ಅಧಿಕೃತ ಅಧಿಕಾರಿಗಳು
ಭಾರತೀಯ ಸ್ಟೇಟ್ ಬ್ಯಾಂಕ್

ಕನ್ನಡಪ್ರಭ

ಪ್ರತಿ ಭಾನುವಾರ ಪ್ರಚಲಿತ
ವಿದ್ಯಮಾನ, ಸಾಹಿತ್ಯ, ಚಿಣ್ಣರಾಟ,
ಪ್ರವಾಸ, ಆಹಾರ ವಿಷಯಗಳ
ಸಮೃದ್ಧ ಮಾಹಿತಿ ಭಾನುಪ್ರಭ

ART | LITERATURE | CULTURE | FOOD | TRAVEL
ಭಾನುಪ್ರಭ

ICICI Home Finance | ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ - ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಇಂಡಿಯಾ
ಶಾಖಾ ಕಚೇರಿ: 2ನೇ ಮಹಡಿ, ಸಪ್ತಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂ ಪಕ್ಕ, ಫೈರ್ ಬ್ರಿಗೇಡ್ ಹತ್ತಿರ, ಕಾಂತರಾಜ್ ಅರಸು ರಸ್ತೆ, ಸರಸ್ವತಿಪುರಂ, ಮೈಸೂರು- 570009.

[ನಿಯಮ 8(6)ಕ್ಕೆ ಪ್ರೊವಿಸೊ ನೋಡಿರಿ]
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಗಾರರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ಅಡಮಾನಿತ/ಸುಪರ್ದಿಗೆ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು **ಸಾಂಕೇತಿಕ ಸ್ವಾಧೀನತೆಯನ್ನು ಪಡೆದುಕೊಂಡಿದ್ದು** ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'', ''ಎಲ್ಲಿ ಏನಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನೇನಿದೆಯೋ ಆಧಾರದಲ್ಲಿ ''ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)/ ಸಹ ಸಾಲಗಾರ(ರು)/ ಜಾಮೀನುದಾರನ(ರ)/ ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿ ಯಾಗಿರುವ ಮೊತ್ತ	ಮೀಸಲು ಬೆಲೆ / ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಎಸ್ ಟಿ ವೆಂಕಟೇಶ್ (ಸಾಲಗಾರರು) ಎಸ್ ವಿ ರಾಜೇಶ್ವರಿ (ಸಹ-ಸಾಲಗಾರರು) ಸಾಲದ ಖಾತೆ ಸಂ. LHMYS00001302861	ಸಕಲ ಸಮಸ್ತವೂ ಸೇರಿದ ಭೂಮಿ ಒಳಗೊಂಡ ಕಟ್ಟಡದ ಸರ್ವೆ ಸಂ. 29/1ಎ ಮತ್ತು 29/2ಎ (ನಿವೇಶನ ಸಂ.1-3-63) 4ನೇ ಬ್ಲಾಕ್, ರಥ ಬೀದಿ ಕುಶಾಲ್‌ನಗರ್, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.	ರೂ. 52,49,447/- ಜೂನ್ 24, 2024	ರೂ. 49,93,650/- ರೂ. 4,99,370/-	05ನೇ, ಆಗಸ್ಟ್ 2024 ರಂದು ಬೆಳಗ್ಗೆ 11:00 ರಿಂದ ಮಧ್ಯಾಹ್ನ 03:00 ರವರೆಗೆ	14, ಆಗಸ್ಟ್ 2024 ಮಧ್ಯಾಹ್ನ 02:00 ರಿಂದ 03:00 ರವರೆಗೆ

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ **ಗ್ಲೋಬ್ ಟೆಕ್** ಮೂಲಕ **(URL Link-/https://BestAuctionDeal.com)** ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ 13ನೇ ಆಗಸ್ಟ್ **2024ರ ಸಾಯಂಕಾಲ 05.00ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಗೆ ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ)ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್ (ಡಿಡಿ) (ಕಾಲಂ ಸಂಖ್ಯೆ ಇ ರಲ್ಲಿ ನಮೂದಿಸಿದಂತೆ)ಯೊಂದಿಗೆ ಸಲ್ಲಿಸಬೇಕು. **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಸಪ್ತಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂ ಪಕ್ಕ, ಫೈರ್ ಬ್ರಿಗೇಡ್ ಹತ್ತಿರ, ಕಾಂತರಾಜ್ ಅರಸು ರಸ್ತೆ, ಸರಸ್ವತಿಪುರಂ, ಮೈಸೂರು- 570009.** ಇಲ್ಲಿಗೆ **13ನೇ ಆಗಸ್ಟ್ 2024ರ ಸಾಯಂಕಾಲ 04.00ರ ಮೊದಲು** , ದಯವಿಟ್ಟು ಗಮನಿಸಿ, ಒಂದು ವೇಳೆ ನಿರೀಕ್ಷಿತ ಬಿಡ್‌ದಾರರು(ಗಳು) ಮೇಲೆ ತಿಳಿಸಿದ ಸಮಯದ ಪ್ರಕಾರ ತಮ್ಮ ಪ್ರಸ್ತಾಪವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಪ್ರತಿಗೆ ಸಹಿ ಮಾಡಿ ಟೆಂಡರ್ ದಾಖಲೆಗಳನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಸಪ್ತಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಂ ಪಕ್ಕ, ಫೈರ್ ಬ್ರಿಗೇಡ್ ಹತ್ತಿರ, ಕಾಂತರಾಜ್ ಅರಸು ರಸ್ತೆ, ಸರಸ್ವತಿಪುರಂ, ಮೈಸೂರು- 570009. 13ನೇ ಆಗಸ್ಟ್ 2024ರ ಸಂಜೆ 05:00 ಕ್ಕೆ ಅಥವಾ ಮೊದಲು** ಸಲ್ಲಿಸಬಹುದು. ಇಎಂಡಿಗಾಗಿನ ಅರ್ನೆಸ್ಟ್ ಮನಿ ಡೆಪಾಸಿಟ್ (ಡಿಡಿ) ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ ''**ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ -ಹರಾಜು**'' **ಕೊಡಗುರವರ** ಪದನಾಮಕ್ಕೆ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರೆ ಯಾವುದೇ ಸ್ಪಷ್ಟನೆಗಳಿಗಾಗಿ ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಮೊಬೈಲ್ ಸಂ.9920807300. ಅಥವಾ ನಮ್ಮ ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರ ನೆಕ್ಸ್‌ಜೆನ್ ಸೊಲ್ಯೂಷನ್ಸ್ ಪ್ರವೇಟ್ ಲಿಮಿಟೆಡ್‌ಗೆ ಸಂಪರ್ಕಿಸುವುದು.
ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ ಅಥವಾ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಬಹುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್‌ಗೆ **https://www.icicihfc.com/** ಭೇಟಿ ಮಾಡಿ.

ದಿನಾಂಕ : ಜುಲೈ 12, 2024
ಸ್ಥಳ : ಕೊಡಗು
ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

FEDERAL BANK
YOUR PERFECT BANKING PARTNER
ದಿ ಫೆಡರಲ್ ಬ್ಯಾಂಕ್ ಲಿ.: ಲೋನ್ ಕಲೆಕ್ಷನ್ ಮತ್ತು ರಿಕವರಿ ಡಿಪಾರ್ಟ್‌ಮೆಂಟ್, ಬೆಂಗಳೂರು ವಿಭಾಗ, ನಂ.3, ಚರ್ಚ್ ಸ್ಟ್ರೀಟ್, 2ನೇ ಮಹಡಿ, ಎಂಎಸ್‌ಆರ್ ವೆಸ್ಟ್ ಪಾರ್ಕ್, ಬೆಂಗಳೂರು-560001, ಕರ್ನಾಟಕ
ದೂರವಾಣಿ: +91 8095828647, ಇ-ಮೇಲ್: bgrlcrd@federalbank.co.in
ವೆಬ್‌ಸೈಟ್: www.federalbank.co.in, CIN: L65191KL1931PLC000368

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಳು)

ಈ ಕೆಳಸಹಿದಾರರು ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್ ಇದರ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರ (ಇನ್ನು ಮುಂದೆ ಆಕ್ಟ್ ಎಂದು ಓದಿಕೊಳ್ಳುವುದು) ಮತ್ತು ಸದರಿ ನಿಯಮದ ಪ್ರಕರಣ 13(12) ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 3ರ ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002 (ಇನ್ನುಮುಂದೆ ನಿಯಮ ಎಂದು ಓದಿಕೊಳ್ಳುವುದು) ಇದರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು ದಿನಾಂಕ: **04.01.2024** ರಂದು ಸಾಲಗಾರರಾದ: 1. ಶ್ರೀ ಶಾದಬ್ ಅಹಮದ್ s/o ಲೇಟ್ ಅಬ್ದುಲ್ ಹಫೀಜ್, ನಂ.302/1, 1ನೇ ಬ್ಲಾಕ್, ಬೈಚನಹಳ್ಳಿ, ಇಂದಿರಾ ಬಡಾವಣೆ, ಕುಶಾಲನಗರ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ, ಕರ್ನಾಟಕ - 571234. 2. ಶ್ರೀಮತಿ ತಾಹಿರಾ ಖಾನಂ, w/o ಅಬ್ದುಲ್ ಹಫೀಜ್, ನಂ.302/1, 1ನೇ ಬ್ಲಾಕ್, ಬೈಚನಹಳ್ಳಿ, ಇಂದಿರಾ ಬಡಾವಣೆ, ಕುಶಾಲನಗರ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ, ಕರ್ನಾಟಕ - 571234. 3. ಶ್ರೀಮತಿ ಉಮೈರಾ ತಾಹಿರ್ ಮೊಹಮ್ಮದ್ w/o ಶಾದಬ್ ಅಹಮದ್, 1). ನಂ. 302/1, 1ನೇ ಬ್ಲಾಕ್, ಬೈಚನಹಳ್ಳಿ, ಇಂದಿರಾ ಬಡಾವಣೆ, ಕುಶಾಲನಗರ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ, ಕರ್ನಾಟಕ - 571234. 2). ಫ್ಲಾಟ್ 8, 4ನೇ ಮಹಡಿ, ಅಂಕೋರೇಜ್ ಬಿಲ್ಡಿಂಗ್, 10/12, ಎಲ್ ಜೆ ರಸ್ತೆ, ಮಹೀಮ್ ಪಶ್ಚಿಮ, ಮುಂಬೈ, ಮಹಾರಾಷ್ಟ್ರ - 400016. ಇವರಿಗೆ ನೋಟೀಸಿನಲ್ಲಿ ತಿಳಿಸಿರುವಂತೆ ಎಫ್‌ಹೆಚ್‌ಎಸ್ ಲೋನ್ ಸಾಲ ಸಂಖ್ಯೆ **19317300000426** ರಲ್ಲಿ ಬರಬೇಕಾದ ಬಾಕಿ ಮೊತ್ತ ರೂ. **58,20,497.38** (ರೂಪಾಯಿಗಳು ಐವತ್ತೆಂಟು ಲಕ್ಷ ಇಪ್ಪತ್ತು ಸಾವಿರದ ನಾಲ್ಕುನೂರಾ ತೊಂಬತ್ತೇಳು, ಪೈಸೆ ಮೂವತ್ತೆಂಟು ಮಾತ್ರ) ಗಳನ್ನು 60 ದಿನಗಳೊಳಗೆ ಮರು ಪಾವತಿ ಮಾಡಲು ಸೂಚಿಸಲಾಗಿತ್ತು.

ಸಾಲಗಾರರು ಸಾಲದ ಹಣವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುವುದರಿಂದ, ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮ 8ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಗೆ ವಿವರಿಸಿದ ಸ್ವತ್ತನ್ನು ಕೆಳಸಹಿದಾರರು ದಿನಾಂಕ 10ನೇ ಜುಲೈ 2024 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಸೆಕ್ಷನ್ 13(8) ರ ಕಾಯಿದೆಗಳಲ್ಲಿ ಅವಕಾಶವಿರುವಂತೆ ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಲಭ್ಯವಿರುವ ಸಮಯದ ಒಳಗೆ ಭದ್ರತಾ ಸ್ವತ್ತುಗಳನ್ನು (ಭದ್ರತಾ ಆಸ್ತಿಗಳನ್ನು) ಮತ್ತೆ ಗಳಿಸಿಕೊಳ್ಳಲು ಅವಕಾಶವಿರುತ್ತದೆ.

ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಈ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್ ಇವರಿಗೆ ದಿನಾಂಕ: 08/07/2024ರಂತೆ ಎಫ್‌ಹೆಚ್‌ಎಸ್ ಲೋನ್ ಸಾಲ ಸಂಖ್ಯೆ 19317300000426 ರಲ್ಲಿ ಬರಬೇಕಾದ ಬಾಕಿ ಮೊತ್ತ ರೂ. 58,59,366.38/- (ರೂಪಾಯಿ ಐವತ್ತೆಂಟು ಲಕ್ಷದ ಐವತ್ತೊಂಭತ್ತು ಸಾವಿರದ ಮುನ್ನೂರ ಅರವತ್ತಾರು ಮತ್ತು ಪೈಸೆ ಮೂವತ್ತೆಂಟು ಮಾತ್ರ) ಮತ್ತು ಇದಕ್ಕೆ ತಗಲುವ ಬಡ್ಡಿಯನ್ನು ಪಾವತಿಮಾಡುವ ಜವಾಬ್ದಾರಿಗೆ ಒಳಪಟ್ಟಿರುತ್ತದೆ.

ಸ್ಥಿರಾಸ್ತಿಯ ವಿವರ

ಎಲ್ಲ ಭಾಗಗಳು ಮತ್ತು ಭಾಗಾಂಶಗಳು ಸೇರಿ ವಸತಿ ನಿವೇಶನ ವಿಸ್ತೀರ್ಣ 107.94466460 ಚದರ ಮೀಟರುಗಳು, ಪೂರ್ವದಿಂದ ಪಶ್ಚಿಮ : 11.996952 ಮೀಟರು, ಉತ್ತರದಿಂದ ದಕ್ಷಿಣ : 8.997714 ಮೀಟರು, ಜೊತೆಗೆ ವಸತಿ ಕಟ್ಟಡ - ವಿಸ್ತೀರ್ಣ ನೆಲಮಹಡಿ : 66.425645 ಮತ್ತು ಮೊದಲ ಮಹಡಿ 66.425645 ಮತ್ತು ಅದರಲ್ಲಿನ ಇತರೆ ಎಲ್ಲ ಅಭಿವೃದ್ಧಿಗಳು. ಖಾತಾ ನಂ. 17-510-38/8, ಸೈಟ್ ನಂ. 04, ಸರ್ವೇ ನಂ. 135 ರಲ್ಲಿ ರೂಪುಗೊಂಡಿದೆ, ವಿಳಾಸ : 1ನೆ ಬ್ಲಾಕ್, ನಿಜಾಮುದ್ದೀನ್ ಬಡಾವಣೆ, ಕುಶಾಲನಗರ ಟೌನ್, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಕರ್ನಾಟಕ. ಕುಶಾಲನಗರ ಉಪ ಜಿಲ್ಲಾ ನೋಂದಣಿ ವ್ಯಾಪ್ತಿಯಲ್ಲಿ. ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. 3, ಪಶ್ಚಿಮಕ್ಕೆ : ಲೇಔಟ್ ರಸ್ತೆ, ಉತ್ತರಕ್ಕೆ : ಲೇಔಟ್ ರಸ್ತೆ, ದಕ್ಷಿಣಕ್ಕೆ : ಕರುಣಾಕರನ್ ರವರ ಆಸ್ತಿ.

ದಿನಾಂಕ :10.07.2024
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿಗಳು
(ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್)

ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಶಿವಕುಮಾರ್ ಆಯ್ಕೆ

ಸೋಮವಾರಪೇಟೆ: ಲಯನ್ಸ್ ಕ್ಲಬ್ ಆಫ್ ಸೋಮವಾರಪೇಟೆ ಆಡಳಿತ ಮಂಡಳಿ ಅಧ್ಯಕ್ಷರಾದ ಎ.ಎಸ್. ಮಹೇಶ್ ಅಧ್ಯಕ್ಷತೆಯಲ್ಲಿ ಶ್ರೀಗಂಧ ಸಭಾಂಗಣದಲ್ಲಿ ಬುಧವಾರ ನಡೆಯಿತು.

ಸಭೆಯಲ್ಲಿ 2024-25ನೇ ಸಾಲಿನ ನೂತನ ಆಡಳಿತ ಮಂಡಳಿ ರಚಿಸಲಾಗಿದ್ದು, ಅಧ್ಯಕ್ಷರಾಗಿ ತೋಳೂರುಶೆಟ್ಟಳ್ಳಿಯ ಸಿ.ಕೆ. ಶಿವಕುಮಾರ್‌ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ಡಿ. ವಿ. ಪದ್ಮಾಕರ ರಾಜ ಅರಸ್, ಕಾರ್ಯದರ್ಶಿಯಾಗಿ ಎಸ್. ಆರ್. ಜಗತ್ ಆಯ್ಕೆಯಾದರು.

ಸಭೆಯಲ್ಲಿ ಸಂಸ್ಥೆ ಹಿರಿಯರಾದ ಎ.ಆರ್. ಮುತ್ತಣ್ಣ, ಜಗದೀಶ್, ಲೀಲಾರಾಂ, ಸಿ.ಕೆ. ಮಲ್ಲಪ್ಪ, ರೋಹಿತ್, ಹರೀಶ್, ತೇಜಸ್ವಿ ಇದ್ದರು.